## ಕ್ಷಯ– ಕುಷ್ಠಕ್ಕೆ ಒಂದೇ ಲಸಿಕೆ

ಕ್ಷಯಕ್ಕೆ ಹೊಸ ಲಸಿಕೆಯೊಂದನ್ನು ಕಂಡುಹಿಡಿದಿದ್ದು, ಅದರಿಂದ ಕುಷ್ಠ ರೋಗವನ್ನೂ ಸಮರ್ಪಕವಾಗಿ ನಿಯಂತ್ರಿಸಲು ಸಾಧ್ಯ ಎಂದು ವಾಷಿಂಗ್ಟನ್ನಿನ ಸಂಶೋಧಕರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇನ್ನೂ ಕೆಲವು ದೇಶಗಳಲ್ಲಿ ಕುಷ್ಠ ರೋಗ ಜೀವಂತವಾಗಿದೆ. ಪ್ರತಿವರ್ಷ 23 ಲಕ್ಷ ಹೊಸ ಕುಷ್ಠ ರೋಗದ ಪ್ರಕರಣಗಳು ದಾಖಲಾಗುತ್ತಿವೆ. ಹೊಸದಾಗಿ ಕಂಡುಹಿಡಿದಿರುವ ಲಸಿಕೆಯನ್ನು ಪ್ರಾಯೋಗಿಕವಾಗಿ ನೀಡಲಾಗಿದ್ದು, ಅದು ನಿರೀಕ್ಷಿತ ಫಲಿತಾಂಶವನ್ನು ನೀಡಿದೆ. ಇದರಿಂದ ಕುಷ್ಠ ರೋಗವನ್ನು ಪರಿಣಾಮಕಾರಿಯಾಗಿ ತಡೆಯಬಹುದು ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

## ಹರೆಯದಲ್ಲಿ ಕಾಮ ಸಾಹಿತ್ಯ ಮಾರಕ

ಕಾಮ ಸಾಹಿತ್ಯ ಓದುವ ಗೀಳನ್ನು ಹದಿಹರೆಯದಲ್ಲಿ ಬೆಳಸಿಕೊಂಡರೆ ಅದರಿಂದ ಮೆದುಳು ಘಾಸಿಗೊಳ್ಳುತ್ತದೆ ಎಂಬುದು ಲಂಡನ್ನಿನ ವಿಜ್ಞಾನಿಗಳು ನಡೆಸಿದ ಅಧ್ಯಯನದಿಂದ ತಿಳಿದು ಬಂದಿದೆ.

ಇತ್ತೀಚಿನ ದಿನಗಳಲ್ಲಿ ಹದಿ ವಯಸ್ಸಿನ ಮಕ್ಕಳು ತಮ್ಮ ಪೋಷಕರ ಕಣ್ಣು ತಪ್ಪಿಸಿ, ಲೈಂಗಿಕ ಪ್ರಚೋದಕ ಸಾಹಿತ್ಯವನ್ನು ಓದುತ್ತಿದ್ದಾರೆ. ಕೆಲವೊಬ್ಬರು ಲೈಂಗಿಕ ಸಂಬಂಧವನ್ನೂ ಬೆಳೆಸಿಕೊಂಡಿರುತ್ತಾರೆ. ಇದರಿಂದಾಗಿ ಅವರ ಮೆದುಳು ಹಾನಿಗೊಳಗಾಗುತ್ತದೆ. ಅಲ್ಲದೆ ಅವರ ಶೈಕ್ಷಣಿಕ ಪ್ರಗತಿಗೂ ಹಾನಿಯಾಗುತ್ತದೆ.

ಇಪ್ಪತ್ತರ ಹರೆಯದಲ್ಲಿಯೂ ದೈಹಿಕ ಸಂಪರ್ಕ ಬೆಳೆಸದ ಯುವಕರು ಇದ್ದಾರೆ ಎಂದರೆ, ಬಹುತೇಕ ಅವರು ಅಂತರ್ಜಾಲದಲ್ಲಿ ಲೈಂಗಿಕ ವಿಷಯಾಸಕ್ತಿ ಬೆಳೆಸಿಕೊಂಡಿರುತ್ತಾರೆ ಎಂದರ್ಥ ಎಂದು ತಜ್ಞರು ಹೇಳಿದ್ದಾರೆ.

## ಬುದ್ಧಿವಂತಿಕೆಗೆ ಏರೋಬಿಕ್

ಮಕ್ಕಳ ಮಾನಸಿಕ ಸಾಮರ್ಥ್ಯಕ್ಕೆ ಕೊಡುವ ಆದ್ಯತೆ, ದೈಹಿಕ ಸಾಮರ್ಥ್ಯಕ್ಕೂ ಕೊಡಬೇಕು. ಯಾವ ಮಗು ದೈಹಿಕವಾಗಿ ಸದೃಢವಾಗಿರುತ್ತೋ ಅದರ ಮೆದುಳಿನ ಸ್ಮರಣ ಶಕ್ತಿ ಹೆಚ್ಚುತ್ತದೆ. ಜೊತೆಗೆ ಏಕಾಗ್ರತೆ ಕೂಡ ಬೆಳೆಯುತ್ತದೆ ಎಂಬ ಸಂಗತಿ ಹೊಸ ಅಧ್ಯಯನದಿಂದ ತಿಳಿದುಬಂದಿದೆ.


ಬಾಲ್ಯದಲ್ಲಿಯೇ ಯಾರು ದೇಹವನ್ನು ಹುರಿಯಂತೆ ಹೊಸೆದು ಹದಗೊಳಿಸಿರುತ್ತಾರೋ ಅವರ ದೇಹದ ನರಮಂಡಲವೂ ಬಲಗೊಳ್ಳುತ್ತದೆ. ನರಗಳಲ್ಲಿರುವ 'White matter' ಎಂಬ ಅಂಶ ಹೆಚ್ಚು ಕ್ರಿಯಾಶೀಲವಾಗುತ್ತದೆ. ಇದು ನರಗಳ ಸಂದೇಶವನ್ನು ಮೆದುಳಿಗೆ ರವಾನಿಸುತ್ತದೆ. ಸದೃಢ ಕಾಯ ಹೊಂದಿದವರ ನರಗಳ ಸಂದೇಶದ ವೇಗ ಮತ್ತು ಪರಿಣಾಮ ಎರಡೂ ತೀವ್ರವಾಗುವುದರಿಂದ ಮೆದುಳು ಹೆಚ್ಚು ಶಕ್ತಿಯುತವಾಗುತ್ತದೆ. ಬುದ್ಧಿವಂತಿಕೆಗೆ ದೇಹದ ಆರೋಗ್ಯ ಕೂಡ ಮುಖ್ಯ ಎನ್ನುವುದು ಸಂಶೋಧಕರ ಅಭಿಮತ.

ಏರೋಬಿಕ್ ಅಭ್ಯಾಸ ಮಾಡುವುದರಿಂದ ದೇಹ ಹಾಗೂ ಮೆದುಳು ಎರಡರ ಸಾಮರ್ಥ್ಯವನ್ನೂ ಹೆಚ್ಚಿಸಿಕೊಳ್ಳಬಹುದು ಎಂದು ಸಂಶೋಧಕರ ತಂಡದ ತಜ್ಞರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

**–ಟಿಪ್ಸ್**

---

### ಸಮುದ್ರ ಮಥನ ಮಾಹಿತಿಯುಕ್ತ ಲೇಖನ




ಬಿ.ಟಿ. ಬೆಳೆ ಏಕೆ ಬೇಕು? ಮುಖಪುಟ ಲೇಖನ (ಡಾ. ವಸಂತ ಕುಮಾರ್ ತಿಮಕಾಪುರ) ಉಪಯುಕ್ತ ಚಿತ್ರಗಳಿಂದ ಕೂಡಿ ಮಾಹಿತಿಯುಕ್ತವಾಗಿದೆ. ಬ್ಯಾಸಿಲಸ್ ಥುರಿಂಜಿಯೆನ್ಸಿಸ್ (ಬಿ.ಟಿ.) ಬ್ಯಾಕ್ಟೀರಿಯಾ, ಬೆಳೆಗಳಿಗೆ ಮಿತ್ರನಾದ ಕಥೆ ಮತ್ತು ಬಿ.ಟಿ. ಬೆಳೆ ವಿಶ್ವಕ್ಕೆ ಪರಿಚಯವಾದ ಬಗ್ಗೆ ಲೇಖಕರು ಸವಿವರ ಮಾಹಿತಿ ನೀಡಿದ್ದಾರೆ. ಜನರಲ್ಲಿ ಬಿ.ಟಿ. ಬೆಳೆಗಳ ಮೇಲಿರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ, ಅವುಗಳ ಬಗ್ಗೆ ಅರಿವು ಮೂಡಿಸಲು ಈ ಲೇಖನವು ಸಹಕಾರಿಯಾಗಿದೆ.

–ಡಾ. ಸುಕನ್ಯಾ ಎಸ್.ಎಲ್., ನೈರೋಬಿ, ಕೀನ್ಯಾ, ಮಹಾವೀರ ಕಾಸರ, ಶಿವಮೊಗ್ಗ, ಎಂ.ಜಿ. ರಾಮಚಂದ್ರ, ಮಂಡಗಳಲೆ, ಸು.ವಿಜಯಲಕ್ಷ್ಮಿ, ಶಿವಮೊಗ್ಗ, ಚನ್ನಬಸವ ಪುತ್ತೂರ, ಚಿತ್ರದುರ್ಗ, ಡಾ.ಗಿರಿರಾಜ ಕುಲಕರ್ಣಿ, ಬೆಂಗಳೂರು, ಅಣೇಕಟ್ಟೆ ವಿಶ್ವನಾಥ್, ಬೆಂಗಳೂರು, ಪ್ರಸನ್ನ ರಾವ್, ಮಂಗಳೂರು

### ವೈರುಧ್ಯ

ಬಿ.ಟಿ. ಬೆಳೆ ಬಗೆಗಿನ ಲೇಖನ ವಿಜ್ಞಾನಿಯೊಬ್ಬರ ಎಲ್ಲ ವೈರುಧ್ಯಗಳನ್ನೂ ತೋರುತ್ತಿದೆ. ಚೀನಾ–ಅಮೇರಿಕವನ್ನು ಅವರು ಉದಾಹರಿಸಿರುವುದೇ ಇದಕ್ಕೆ ಸಾಕ್ಷಿ. ಅಮೇರಿಕಾದ ಕೃಷಿ ಸ್ಥಿತಿ ಎಲ್ಲರಿಗೂ ಗೊತ್ತು. ಕೆಟ್ಟಿರುವ ಭೂಮಿಯನ್ನು ವರ್ಷಗಟ್ಟಲೆ ಬೀಳುಬಿಟ್ಟು ರಿಪೇರಿ ಮಾಡಲು ಸರ್ಕಾರವೇ ಹಣ ಕೊಡುತ್ತದೆ. ಚೀನಾ? ಅದರ ಜಮೀನು ಪರಿಸರದ ಬಗ್ಗೆ ನಮಗೆ ಏನೂ ಗೊತ್ತಿಲ್ಲ. ಒಂದು ಖಾಸಗೀ ಬಂಡವಾಳದ ದೊಡ್ಡಣ್ಣ, ಇನ್ನೊಂದು ಎಲ್ಲವೂ ಸರ್ಕಾರದ ವಶದಲ್ಲಿರುವ ದಮನಕಾರೀ ಪ್ರಭುತ್ವ. ನಮಗೆ ಇದು ಹೇಗೆ ಹೊಂದುತ್ತದೆ ಎಂದು ತಿಮಕಾಪುರ ಹೇಳಬೇಕು. ತಂತ್ರಜ್ಞಾನವೆಂಬುದು ಅದರಷ್ಟಕ್ಕೇ ಇರುವುದಿಲ್ಲ. ಅದು ನೆಲಕ್ಕಿಳಿವ ನೆಲದ ಸಾಮಾಜಿಕ ಆರ್ಥಿಕ ವಾಸ್ತವವನ್ನೂ ಗಮನಿಸಬೇಕು.

–ಕೆ.ಪಿ. ಸುರೇಶ

### ಚಿಂತನಾರ್ಹ

ವೈನತೇಯ ಅವರ 'ವಿಚಾರ ಲಹರಿ' ಕೊಳ್ಳುಬಾಕ' ಪ್ರವೃತ್ತಿ ಚಿಂತನಾರ್ಹವಾಗಿದೆ.

–ಹೇಮಲತಾ ಸುಬ್ರಹ್ಮಣ್ಯ, ಕೊಣಂದೂರು, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ನೆ.ಲ. ರಾಮಮೂರ್ತಿ, ಬೆಂಗಳೂರು

### ಅರ್ಥ ತಿಳಿಯಲಿಲ್ಲ

ವಿಚಾರ ಲಹರಿ ಲೇಖನ ಅರ್ಥಪೂರ್ಣವಾಗಿತ್ತು. ಮೂಲ್ಸೈ, ವೃಜ್ರಂಭಿಸುತ್ತಿದೆ ಪದಗಳು ತಪ್ಪಾಗಿವೆ. ಕೊನೆಗೆ ಇಂಗ್ಲಿಷ್‌ನಲ್ಲಿ ಬರೆದ ಸಾಲಿನಲ್ಲಿ ehauffeur ರ ಅರ್ಥ ತಿಳಿಯಲಿಲ್ಲ.

–ಸಮುದ್ರವಳ್ಳಿ ವಾಸು, ಆಲೂರು, ಹಾಸನ

ಹೌದು, ಮೇಲಿನ ಎರಡು ಪದಗಳು ಮೇಲ್ಸೈ, ವಿಜೃಂಭಿಸುತ್ತಿದೆ ಮತ್ತು ಇಂಗ್ಲಿಷ್ ಪದ chauffeur ಎಂದಾಗಬೇಕಿತ್ತು. (–ಸಂ)

### ಪ್ರಾಣ್ ಸ್ಮರಣೆ

ಪ್ರಾಣ್ ಕುರಿತ 'ಪ್ರಾಣ ಇರುವವರೆಗೆ' ಬಿ.ಎಂ. ಹನೀಫ್ ಲೇಖನ ಸಕಾಲಿಕ. ತಮ್ಮ ವಿಶಿಷ್ಟ ಕಾರ್ಟೂನುಗಳ ಮೂಲಕ ದೇಶ ವಿದೇಶಗಳಲ್ಲಿ ಖ್ಯಾತರಾಗಿದ್ದ ಪ್ರಾಣ್‌ರ ಸ್ಮರಣೆ ಚೆನ್ನಾಗಿ ಮೂಡಿಬಂದಿದೆ. ಪ್ರಾಣ್ ಸೃಷ್ಟಿಸಿರುವ ರಾಮನ್, ಡಾಬೂ, ಪಿಂಕಿ ಪಾತ್ರಗಳು ದೀರ್ಘಕಾಲ ನೆನಪಿನಲ್ಲಿ ಉಳಿಯುವಂಥವು!

–ಎಸ್. ಚನ್ನಪ್ಪ, ಮೈಸೂರು

### ಪುಟಾಣಿ ಪುಟ್ಟಿ ಸವಿನೆನಪು

ನಾನು ಚಿಕ್ಕವಳಿದ್ದಾಗ ಸುಧಾದಲ್ಲಿ ಪ್ರಾಣ್ ಅವರ ಪುಟಾಣಿ ಪುಟ್ಟಿ ಕಾಮಿಕ್ಸ್ ಬರುತ್ತಿತ್ತು. ಇದನ್ನು ಓದುವ ಕಾತುರ ಮನೆಯಲ್ಲಿ ಎಲ್ಲರಿಗೂ ಇತ್ತು. ಪ್ರತೀ ವಾರ ಸುಧಾ ಬರುತ್ತಿದ್ದಂತೆ ನನಗೂ ಅಕ್ಕನಿಗೂ 'ಸುಧಾ ಜಗಳ' ನಡೆಯುತ್ತಿತ್ತು. ಆಗ ನನಗೆ 'ಸುಧಾ' ತುಂಬ ಇಷ್ಟವಾಗುತ್ತಿದ್ದದ್ದು ಬೇರೆಲ್ಲದಕ್ಕಿಂತ 'ಪುಟಾಣಿ ಪುಟ್ಟಿ'ಯಿಂದ. ಏಳನೇ ತರಗತಿಯಲ್ಲಿರುವಾಗ ಈ ಕಾಮಿಕ್ಸ್ ನಿಂತುಹೋಯಿತು. ಆದರೆ ಆ ನೆನಪು ಮಾತ್ರ ಇಂದಿಗೂ ಜೀವಂತ. ಪ್ರಾಣ್‌ನಂತವರ ಮೂಲಕ ನಮ್ಮ ಬಾಲ್ಯವನ್ನು ಸುಂದರವಾಗಿಸಿದ 'ಸುಧಾ'ಕ್ಕೂ ಧನ್ಯವಾದಗಳು.

–ಡಾ.ಕೆ.ಎಸ್. ಪವಿತ್ರ, ಶಿವಮೊಗ್ಗ

### ಕೋತಿ ಪಡೆ ಸೋಜಿಗ

ಡಾ. ಅರುಣ್ ಇಸ್ಲೂರ್‌ರ ಲೇಖನ 'ತೆಂಗಿನ ಕೊಯ್ಲಿಗೆ ಕೋತಿ ಪಡೆ!' ಓದಿ ತ್ರೇತಾಯುಗದಲ್ಲಿ ಶ್ರೀರಾಮನಿಗೆ ಸಮುದ್ರದಲ್ಲಿ ಸೇತುವೆ ಕಟ್ಟಲು ಸಹಾಯಗೈದ ವಾನರಪಡೆ ನೆನಪಾಗಿ, ಈ ಕಲಿಯುಗದಲ್ಲೂ ಅವುಗಳ ಸಹಾಯಹಸ್ತ ಚಾಚಿರುವುದು ಸೋಜಿಗವೆನಿಸಿತು.

–ಸರಸ್ವತಿ ಭೂಷಣ್, ನೆಲಮಂಗಲ, ಮುಕುಂದ ಹೆರಕಲ್ಲ, ಗುಲ್ಬರ್ಗ, ಪಿ.ಎಸ್. ಶ್ರೀವತ್ಸ, ಬೆಂಗಳೂರು, ರಾಜಶೇಖರ ಹಾದಿಮನಿ, ಧಾರವಾಡ, ಪ್ರದೀಪ್ ಎಸ್. ಚೆಲುವರಸನಕೊಪ್ಪಲು, ಮಹಾಲಕ್ಷ್ಮಿ ಸಾಗರ, ಸುಹಾಸ, ಪುತ್ತೂರು, ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ

### ಕಥೆ ಚೆನ್ನಾಗಿದೆ

ವಾಕಿಂಗ್ ಟ್ರ್ಯಾಕ್ ಮೇಲೊಂದು ಒಂಟಿ ಗುಲ್‌ಮೊಹರ್, ನಾ.ಡಿಸೋಜ ಅವರ ಕಥೆ ಚೆನ್ನಾಗಿದೆ.

–ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

### ಅದ್ಭುತ

ವಂಡರ್ ಪುಟದ ನಾಲಿಗೆಯೇ ಕುಂಚ ಬಹಳ ಅದ್ಭುತವಾಗಿದೆ. ನಾವು ಕೈಯಿಂದ ಚಿತ್ರ ಬಿಡಿಸಲು ಒದ್ದಾಡುವಾಗ ಇವರು ನಾಲಿಗೆಯನ್ನೇ ಕುಂಚದ ರೀತಿ ಬಳಸಿ ಚಿತ್ರ ಬಿಡಿಸುವುದನ್ನು ನೋಡಿದರೆ ಬಹಳ ಸೋಜಿಗವೆನಿಸುತ್ತದೆ.

–ಓಂಚನ್ನೇಶ್ ಅರಬಿಳಚಿ ಕ್ಯಾಂಪ್, ವೈ.ಜಿ. ನರಸಿಂಹನ್, ಶಿವಮೊಗ್ಗ